International Journal of Kannada Research
www.kannadajournal.com

**ISSN: 2454–5813**
IJSR 2016; 2(4): 98-101
© 2016 IJKS
www.kannadajournal.com
Received: 17-08-2016
Accepted: 18-09-2016

**Yankamma**
ಋಜ, ಏಚಿಟಿಟಿಚಿಜಚಿ ಗಟಿುತಜಥಿಣಥಿ,
ಉಾಚಿಟಚಿ, ಏಚಿಡಿಟಿಚಿಣಚಿಞಚಿ, ಃಟಿಜುಚಿ

# ಅನುಭಾವ ದೀಪಗಳು

**Yankamma**

ಈ ಅನುಭಾವ ದೀಪಗಳು ಎಂಬ ನುಡಿ ಹೇಳಿಸಿಕೊಂಡಿರುವ ಈ ಅನುಭಾವಿಗಳು ಸಾಧನೆಯ ಸಿದ್ಧಿಯನ್ನು ಪಡೆದಾಗ ಇವರಿಗುಂಟಾದ ಆ ಸಾಧನೆಯ ಶಕ್ತಿಯ ಸ್ಪರ್ಶದಿಂದ ಇವರು ಬೆಳಗುವ ದೀಪಗಳೆನಿಸಿಕೊಂಡರು.

ಈ ದೀಪಗಳಲ್ಲಿ ನಾವು ನೋಡುತ್ತಿರುವುದು ಮಹಿಳೆಯರನ್ನು ಮಾತ್ರ ಅನೇಕರಲ್ಲಿ ಕೆಲವರನ್ನು ಆಯ್ದು ಕೊಳ್ಳಲಾಗಿದೆ. ಇಲ್ಲಿ ತೆಗೆದುಕೊಂಡಿರುವ ಈ ಮಹಿಳಾ ಶರಣೆ ಅನುಭಾವಿ ದೀಪಗಳು ತೀರಾ ಕೆಳವರ್ಗವೆಂದು ಕರೆಯಲ್ಪಡುವ ಸಾಮಾಜಿಕವಾಗಿ ಕೆಳಮಟ್ಟದಿಂದ ಬಂದಿರುವವರಾಗಿದ್ದಾರೆ. ಹನ್ನೆರಡನೆಯ ಶತಮಾನದ ಕಾಲದಲ್ಲಿದ್ದ ಇವರಲ್ಲಿ ಕೆಲವರಿಗೆ ಶಿಕ್ಷಣದ ಅರಿವಿಲ್ಲದ ಅನಕ್ಷರಸ್ತರು ಇನ್ನು ಕೆಲವರು ಅಲ್ಪಮಟ್ಟದ ಶಿಕ್ಷಣವನ್ನು ಪಡೆದಿದ್ದರು. ಆದರೆ ಇವರಿಗೆ ಲೋಕದ ಬಗೆಗಿನ ಜ್ಞಾನವಿತ್ತು. ಅದರಲ್ಲಿನ ಜೀವನದ ಅಳಿವು ಉಳಿವಿನ ಅರಿವಿತ್ತು. ಕೆಲವರಂತೂ ದಾಂಪತ್ಯ ಜೀವನಕ್ಕೆ ಬೆಳಗುವ ದೀಪಗಳಾಗಿದ್ದರು.

ಮಹಿಳೆ ಮತ್ತು ಪುರುಷರಲ್ಲಿ ಇದ್ದಂತ ಭೇದಭಾವಗಳು ಹನ್ನೆರಡನೆಯ ಶತಮಾನದಲ್ಲಿ ಇದಕ್ಕೊಂದು ಸರಿಸಮಾನತೆಯನ್ನು ಕಂಡುಕೊಂಡಿತು. ಗಂಡು ಹೆಣ್ಣು ಎಂಬ ತಾರತಮ್ಯವನ್ನು ಹೊಡೆದೋಡಿಸಿತು. ಹನ್ನೆರಡನೆಯ ಶತಮಾನದಲ್ಲಾದ ಕ್ರಾಂತಿಯಿಂದಾದ ಬದಲಾವಣೆಯಲ್ಲಿ ಮುಖ್ಯವಾದುದು ಗಂಡು ಹೆಣ್ಣಿನ ಸಮಾನತೆ. ಆಲ್ಲಿಯವರೆಗೆ ಹೆಣ್ಣನ್ನು ದೂರದಿಂದಲೇ ಕಾಣುತ್ತಿದ್ದ ಈ ಪುರುಷರೆನಿಸಿಕೊಂಡ ಶರಣರು ಹೆಣ್ಣನ್ನು ತಮ್ಮ ಸಮನಾಗಿ ಕಂಡರೂ. ಈ ಅವಕಾಶಕ್ಕಾಗಿ ಕಾಯುತ್ತಿದ್ದ ಮಹಿಳಾಮಣಿಗಳು ತಮ್ಮ ತಮ್ಮ ಸಮರ್ಥ ಪ್ರತಿಭೆಯನ್ನು ಕತ್ತಲಿನಲ್ಲಿ ಬಚ್ಚಿಟ್ಟುಕೊಂಡು ಈ ಶಕ್ತಿಯನ್ನು ಬೆಳಕಿಗೆ ತೆಗೆದಾಗ ಅದು ಸೂರ್ಯನ ಬೆಳಕಿನ ಕಿರಣಗಳಿಗೆ ಚಿಗುರೊಡೆಯಲು ಪ್ರಾರಂಭವಾಯಿತು. ಈ ಚಿಗುರೊಡೆದ ಅನೇಕ ಶರಣೆಯರಲ್ಲಿ ಮೂರೂ ಜನ ಮಹಿಳೆಯರನ್ನು ತೆಗೆದು ಕೊಳ್ಳಲಾಗಿದೆ: ಇವರೆ,

### ಅಕ್ಕಮಹಾದೇವಿ, ದುಗ್ಗಳೆ, ಕದಿರೆಮ್ಮವ್ವೆ, ಗೊಗ್ಗವ್ವೆ

ಇಲ್ಲಿ ಒಂದು ಮುಖ್ಯವಾದ ಸಂಗತಿ ಗಮನಿಸುವುದಾದರೆ ಇಂದಿನ ಅಧುನಿಕ ಯುಗವೆನಿಸಿಕೊಂಡ ಈ ೨೧ ನೆಯ ಶತಮಾನದಲ್ಲಿ ಮಹಿಳೆ ಪುರುಷ ಜೊತೆ ಸರಿಸಮಳಾಗಿ ದುಡಿಯುತ್ತಿರುವುದಕ್ಕೆ ಈ ನಮ್ಮ ಶರಣೆಯರು ಪ್ರೇರಣೆ ಎನ್ನಬಹುದಾಗಿದೆ. ಕಾರಣವಿಷ್ಟೇ ಇಲ್ಲಿ

**Correspondence**
**Yankamma**
ಋಜ, ಏಚಿಟಿಟಿಚಿಜಚಿ ಗಟಿುತಜಥಿಣಥಿ,
ಉಾಚಿಟಚಿ, ಏಚಿಡಿಟಿಚಿಣಚಿಞಚಿ, ಃಟಿಜುಚಿ

ಆಧುನಿಕ ಮಹಿಳೆಯಲ್ಲಿ ಸಮಾನತೆ ಎಂಬ ಪದ ಹುಟ್ಟುವಿಕೆಗೆ ನಮ್ಮ ಶರಣೆಯರೇ ಸ್ಫೂರ್ತಿ. ಅವರ ಶರಣತ್ವದ ಧೈರ್ಯತನದ ಶಕ್ತಿಯು ಇಂದಿನ ಮಹಿಳೆಗೆ ಗಂಡಸಿನ ಸರಿಸಮನಾಗಿ ದುಡಿಯಲು ಕಾರಣ ಎನ್ನಬಹುದು.

ಅಂದು ಮಹಿಳೆ ಎನಿಸಿಕೊಂಡ ಅಕ್ಕ ಮಹಾದೇವಿ ಮನೆಯಿಂದ ಹೊರಬಂದು ಸಮಾಜದಲ್ಲಿ ತನಗೆದುರಾದ ಹಲವಾರು ಸಮಸ್ಯೆಗಳನ್ನು ಎದುರಿಸಿ ಅನುಭವ ಮಂಟಪದ ಸಭೆಯಲ್ಲಿ ಗಂಡಸಿನ ಮುಂದೆ ಧೈರ್ಯವಾಗಿ ನಿಂತು ಮಾತಿಗೆ ಮಾತೆಂಬ ಉತ್ತರವನ್ನು ಕೊಟ್ಟು ತನಗೂ ಈ ಗಂಡಸರಾದ ಶರಣರೊಂದಿಗೆ ಸಮಾನತೆ ಇದೆ ಎಂಬುದನ್ನು ತೋರಿಸಿ ಕೊಟ್ಟಳು. ಅಕ್ಕ ಮಹಾದೇವಿ ಅನುಭವ ಮಂಟಪವನ್ನು ಪ್ರವೇಶಿಸಿ ಶರಣರಾದ ಅಲ್ಲಮನಿಗೆ ಶರಣೆಯಾಗಿ ಹೆದರದೆ ಅವರ ಸರಿಸಮನಾಗಿ ಕೊಟ್ಟ ಉತ್ತರವನ್ನು ಅವಲೋಕಿಸಿದಾಗ ಸಮಾನತೆಯ ಅರ್ಥ ಸಿಗುತ್ತದೆ. ಅಕ್ಕ ಅನುಭವ ಮಂಟಪವನ್ನು ಪ್ರವೇಶಿಸಿದಾಗ ಅಲ್ಲಮನು ಹಾಕಿದ ಪ್ರಶ್ನೆ:

**ಪ್ರಶ್ನೆ**

"ಯೋವ್ವನವನೊಳಕೊಂಡ ಸತಿ ನೀನು ಇತ್ತಲೇಕೆ ಬಂದಿಯವ್ವಾ!
ಸತಿಯೆಂದರೆ ಮುನಿವರು ನಮ್ಮ ಶರಣರು
ನಿಮ್ಮ ಪತಿಯ ಕುರುಹ ಹೇಳಿದರೆ ಬಂದು ಕೊಳ್ಳಿರು
ಅಲ್ಲದಿರೆ ತೊಲಗು ತಾಯಿ!
ನಮ್ಮ ಗುಹೇಶ್ವರನ ಶರಣರಲ್ಲಿ ಸಂಗ ಸುಖ ಸನ್ನಿಹಿತವ ಬಯಸುವರೇ
ನಿನ್ನ ಪತಿ ಯಾರೆಂದು ಹೇಳಲೆ ಎಲೆ ಅವ್ವ"![1]

ತುಂಬಿದ ಈ ಸಭೆಯಲ್ಲಿ ಅಕ್ಕಮಹಾದೇವಿ ತಡವರಿಸದೆ ಉತ್ತರವನ್ನು ನೀಡುತ್ತಾಳೆ:

ಗುರುವೇ ಹೆತ್ತಪ್ಪನಾಗಿ ಲಿಂಗ ಮದುವಣಿಗನಾದ
ನಾರೀ ಮಹಾದೇವಿ ನಾನೇ ಮದುವಿ ಮಗಳಾದೆ !
ಹರಶರಣ – ಶರಣೆಯರು ನಿಬ್ಬಣಿಗರಾಗುತ !
ಕರೆತಂದರೆನ್ನ ಪತಿಯ ಮನೆಗೆ ಪ್ರಭುದೇವ !
ಪಚ್ಚೆಯದ ನೆಲಗಟ್ಟು ಕನಕದ ತೋರಣ !
ವಜ್ರದ ಕಂಭ ಮುತ್ತಿನ ಸರವ ಕಟ್ಟಾತ !
ಹವಳದ ಹಂದರ ಹಾಕಿ ಮದುವೆ ಮಾಡಿದರಣ್ಣ
ಚನ್ನ ಮಲ್ಲಿಕಾರ್ಜುನ (ಮಲ್ಲಯ್ಯ ) ನೆನ್ನ ಪತಿಯು
ಪ್ರಭುದೇವ
ಹುಟ್ಟುಸಾವುಗಳಿಲ್ಲ, ಕುಲವು ಗೋತ್ರಗಳಿಲ್ಲ !
ಕೆಟ್ಟಗುಣದವನಲ್ಲ ಎನ್ನ ಪತಿರಾಯ
ನಿಷ್ಠಾವಂತರ ಮನಕೆ ಮೆಚ್ಚಿ ಬರುತಿಹನಲ್ಲ !
ಶ್ರೇಷ್ಠ ಚೆನ್ನಮಲ್ಲಯ್ಯನೊಲವು ನೋಡಾ ಪ್ರಭುದೇವಾ"![2]

**ದುಗ್ಗಳೆ**

ಹೆಣ್ಣು ಹುಟ್ಟಿನಿಂದ ಯವ್ವನದವರಿಗೂ ಒಂದಲ್ಲಾ ಒಂದು ಕಷ್ಟದ ಪರಿಸ್ಥಿತಿಗೆ ಬಿದ್ದು ಒದ್ದಾಡುತ್ತಿರುತ್ತಾಳೆ. ಹೀಗಿರುವಾಗ ಮದುವೆ ಅನ್ನುವ ಮಾತು ಬಂದಾಗ ಅವಳಿಗೆ ಅಲ್ಲಿಂದ ಒಂದು ಕಡೆ ನಡುಕ ಯಾಕೆಂದರೆ ಮದುವೆ ನಂತರದ ಬಾಳು ಹೇಗೆ ಎಂದು?

ಮದುವೆಗೆ ಕನ್ನೆಯನ್ನು ನೋಡಲು ಬಂದವರು ಎಷ್ಟು ಪರೀಕ್ಷೆಗಳನ್ನು ಮಾಡಿ ತಮಗೆ ಮೆಚ್ಚುಗೆಯಾದಾಗ ಕನ್ಯೆ ಒಪ್ಪಿಗೆಯಂದು ಹೇಳಿ ಮದುವೆಮಾಡಿಕೊಳ್ಳುತ್ತಿದ್ದರು. ಶರಣೆ ದುಗ್ಗಳೆಯನ್ನು ಮದುವೆ ಮಾಡಿಕೊಂಡ ದೇವರ ದಾಸಿಮಯ್ಯ ಶರಣೆ ದುಗ್ಗಳಿಗೆ ಒಡ್ಡಿದ ಪರೀಕ್ಷೆಗಳೇನು ಎಂಬುದನ್ನು ಅರಿಯಲೇ ಬೇಕು. ದಾಸಿಮಯ್ಯ ಹನ್ನೆರಡು ವರ್ಷಗಳ ಕಾಲ ಮದುವೆಗಾಗಿ ಕನ್ಯೆಗಳ ಹುಡುಕಾಟ ನಡೆಸಿದ್ದಾನೆ. ಅಲ್ಲಿಯವರಿಗೆ ಯಾವ ಕನ್ಯೆಯು ದಾಸಿಮಯ್ಯನಿಗೆ ಒಪ್ಪಿಗೆಯಾಗಿಲ್ಲ. ಹನ್ನೆರಡು ವರ್ಷದ ನಂತರ ದುಗ್ಗಳೆಯನ್ನು ನೋಡಲು ಬಂದಿದ್ದಾನೆಂದರೆ ಅವಳಿಗೆ ಅದೆಂಥಾ ಪರೀಕ್ಷೆಯನ್ನು ಎಂಬುದೊಂದು ಎಲ್ಲರು ಎಲ್ಲರ ಮನಸ್ಸು ಮತ್ತು ಕಣ್ಣುಗಳನ್ನು ಅರಳಿಸಿ ಗಮನಿಸುವಂತ ವಿಷಯ.

"ಮರಳು ಬೆರೆಸಿದ ಅಕ್ಕಿ ಮತ್ತು ಒಂದು ಕಬ್ಬಿನ ಕೋಲು ಹಿಡಿದು ಇದರಿಂದ ಪಾಯಸ ಮಾಡಿ ಬಡಿಸಿದವರನ್ನು ಮದುವೆಯಾಗುವೆ" [3]

ಇದೇ ಘೋಷಣೆಯಲ್ಲಿ ಹೆಣ್ಣನ್ನು ಹುಡುಕ ಹೊರಟ ಇವನನ್ನು ಮದುವೆಯಾಗಲು ಯಾರು ಮುಂದೆ ಬರಲಿಲ್ಲ. ಆದರೆ ದುಗ್ಗಳೆಯು ಈ ಮಾತನ್ನು ಒಪ್ಪಿ ದೇವರ ದಾಸಿಮಯ್ಯನನ್ನು ಮದುವೆಯಾಗಲು ಮುಂದೆ ಬರುತ್ತಾಳೆ.

ಕಬ್ಬಿನ ಜಿಲ್ಲಿಯಿಂದ ರಸ ತೆಗದು ಅದನ್ನು ಮರೆಳು ಬೆರೆಸಿ ಅಕ್ಕಿಗೆ ಹಾಕುವಳು ಮರಳು ತಳದಲ್ಲಿ ಉಳಿದು ಅಕ್ಕಿ ಮೇಲೆ ಬರುವುದು ಕಬ್ಬಿನ ರಸ ತೆಗೆದ ಜಿಲ್ಲೆಯನ್ನು ಉರುವಲಾಗಿ

ಬಳಸಿ ಅಕ್ಕಿ ಮತ್ತು ಕಬ್ಬಿನ ರಸದಿಂದ ಪಾಯಸ ತಯಾರಿಸುವಳು"[4]

ಈ ಪರೀಕ್ಷೆಯಲ್ಲಿ ಉತ್ತೀರ್ಣಳಾದ ದುಗ್ಗಳೆಯನ್ನು ದಾಸಮಯ್ಯ ಸಂತೋಷದಿಂದ ಮದುವೆಯಾಗುತ್ತಾನೆ. ಹೆಣ್ಣಿನ ಜೀವನದ ಹಾದಿಯಲ್ಲಿ ಏನೇ ಸಮಸ್ಯೆಗಳು ಎದುರಾದರು ಅದನ್ನು ಮೆಟ್ಟನಿಂತು ಜಯಶೀಲಳಾಗಿ ಆದರ್ಶ ಹೆಣ್ಣಾಗಿ ಬಾಳಿಬದುಕಿದ್ದಾಳೆನ್ನುವುದು ಇಲ್ಲಿ ತಿಳುದು ಬರುತ್ತದೆ.

## ಗೊಗ್ಗವ್ವೆ

ಧೂಪದ ಹೊಗೆ ಎಂದರೆ ಭಗವಂತನಾದ ಶಿವನಿಗೆ ಬಲು ಪ್ರಿಯವಾದುದಾಗಿದೆ. ಇವನ ಈ ಇಚ್ಛೆಯನ್ನರಿತ ಶಿವಶರಣೆ ಗೊಗ್ಗವ್ವೆ ಇದೇ ಮಾರ್ಗವನ್ನುನುಸರಿಸಿ ಶಿವನಿಗೆ ಪ್ರಿಯಳೆನಿಸಿ ಅವನ ದರ್ಶನವನ್ನು ಪಡೆದು ಅನುಭಾವಿ ಶಿವಶರಣೆ ಧೂಪದ ಗೊಗ್ಗವ್ವೆ ಎನಿಸಿಕೊಂಡಳು.

ಗೊಗ್ಗವ್ವೆ ತಾಯಿ ತಂದೆ ಕೂಡ ಇಬ್ಬರು ಶಿವಭಕ್ತರು. ಶಿವನ ವರದಿಂದ ಜನಿಸಿದ ಗೊಗ್ಗವ್ವೆ ಒಂದು ದಿನವೂ ತಪ್ಪದೆ ಶಿವನ ಪೂಜೆಯನ್ನು ಮಾಡುತ್ತಿದ್ದಳು. ವಯಸ್ಸಿಗೆ ಬಂದ ಗೊಗ್ಗವ್ವೆಗೆ ಮದುವೆ ಮಾಡಲು ಬಯಸುತ್ತಾರೆ. ಇದನ್ನು ತಿಳಿದು ಗುಗ್ಗವ್ವೆ ಮದುವೆಯನ್ನು ನಿರಾಕರಿಸುತ್ತಾಳೆ. ತಂದೆ ತಾಯಿಂದ ಮದುವೆಯ ವಿಚಾರವಾಗಿ ಕಾಣೆಯಾಗ ಬಯಸಿದ ಕಾರಣ ಮದುವೆಯ ಮಾತನ್ನು ದೂರಮಾಡಿ ಅವಳನ್ನು ಅವಳಿಚ್ಛೆಯಂತೆ ಶಿವನ ಪೂಜೆಯಲ್ಲಿಯೇ ನಿರತಳಾಗಲು ಒಪ್ಪುತ್ತಾರೆ. ಶಿವನ ಪೂಜೆಯಲ್ಲಿಯೇ ತಲ್ಲೀನಳಾಗಿ ಅವನನ್ನೇ ತನ್ನ ಕಣಕಣದಲ್ಲಿ ತುಂಬಿಕೊಂಡು ಆರಾದಿಸುತ್ತ ಧ್ಯಾನಿಸುತ್ತ ಪ್ರತಿದಿನ ಪ್ರತಿ ಕ್ಷಣ ಆತನ ಸೇವೆಯಲ್ಲಿದ್ದ ರೂ. ಶಿವನು ಅವಳನ್ನು ಪರೀಕ್ಷಿಸಲು ಒಂದು ದಿನ ಅವಳಿದ್ದಲ್ಲಿಗೆ ಬರುತ್ತಾನೆ.

"ಸುಂದರವಾದ ರೂಪುಳ್ಳ ಆಕರ್ಷಕ ವ್ಯಕ್ತಿತ್ವವುಳ್ಳ ಒಬ್ಬ ಯುವಕನ ವೇಷದಲ್ಲಿ ಬಂದು ತನ್ನನ್ನು ವರಿಸುವಂತೆ ಗೊಗ್ಗವ್ವೆಯನ್ನು ಕೇಳುತ್ತಾನೆ. ಗೊಗ್ಗವ್ವೆ ನಿರಾಕರಿಸಲು ತನ್ನ ಕೈಯಲ್ಲಿದ್ದ ಕತ್ತಿಯನ್ನು ತೋರಿಸುತ್ತ ನೀನು ನನ್ನ ಸತಿಯಾಗದಿದ್ದರೆ ನಿನ್ನನ್ನು ಇರಿದು ಕೊಲ್ಲುವೆನು ಎಂದು ಹೆದರಿಸುತ್ತಾನೆ. ಆದರೆ ಅವಳು ಆ ಬೆದರಿಕೆಗೂ ಬಗ್ಗುವದಿಲ್ಲ. ಆಗ ಯುವಕ ತನ್ನ ಕತ್ತಿಯನ್ನು ಗೊಗ್ಗವ್ವೆಯ ಶಿರದ ಮೇಲಿಡುತ್ತಾನೆ. ಅವಳು ಕಣ್ಮುಚ್ಚಿ ಶಿವನನ್ನು ಧ್ಯಾನಿಸುತ್ತಾಳೆ. ಆಗ ಯುವಕ ವೇಷಧಾರಿಯಾದ ಶಿವ ಪ್ರತ್ಯಕ್ಷನಾಗಿ ಮೆಚ್ಚಿದೆ, ಬೇಡು ಎನ್ನಲು ಪರಶಿವನು ಸಂತುಷ್ಟನಾಗಿ ಅವಳ ಭಕ್ತಿಗೆ ತನ್ನ ಮೇಲಿರುವ ಅಚಲ ನಿಷ್ಠೆಗೆ ಮಾರುಹೋಗಿ ಸ್ವತಃ ತಾನೇ ಗುರುವಾಗಿ ಗೊಗ್ಗವ್ವೆಗೆ ವೀರಶೈವ ಉಪದೇಶವನ್ನು ನೀಡುತ್ತಾನೆ".[5]

ಶರಣೆಯರಲ್ಲಿರುವ ಒಂದು ಗುಣವೆಂದರೆ ಅವರು ತಮ್ಮ ತಮ್ಮದೇ ಹಾದಿಯ ಸುಖವೊಂದೇ ಸಾಕು ತಮಗೆ ಎಂಬ ಸ್ವಾರ್ಥತೆಯ ಭಾವನೆಯಲ್ಲಿರದೆ ಇತರರನ್ನು ಅವರ ಹಿತಾಭಿಲಾಷೆಯನ್ನು ಪೂರೈಸಲು ಇತರರಿಗೆ ಆತ್ಮೋದ್ಧಾರದ ಮಾರ್ಗದರ್ಶನವನ್ನು ನೀಡುತ್ತಿದ್ದರು. ಕೇರಳ ದೇಶದ ದೊರೆ ಕೈಲಾಸ ಹುಡುಕುತ್ತಾ ಹೊರಟವನಿಗೆ ತನ್ನ ನಿತ್ಯ ಪೂಜದ ಧೂಪದ ಹೊಗೆಯ ಮಹಿಮೆಯಲ್ಲಿಯೇ ಕೈಲಾಸವನ್ನು ತೋರಿಸಿ ಅದನ್ನು ಅವನು ನಿತ್ಯ ಪಾಲಿಸುವಂತೆ ಉಪದೇಶಿಸಿದಳು. ಗೊಗ್ಗವ್ವೆಯ ವಚನದ ಒಂದು ಸಾಲು :

" ಗಂಡು ಮೋಹಿಸಿ ಹೆಣ್ಣ ಹಿಡಿದಡೆ  
ಅದು ಒಬ್ಬರ ಒಡವೆ ಎಂದು ಅರಿಯಬೇಕು  
ಹೆಣ್ಣು ಮೋಹಿಸಿ ಗಂಡ ಹಿಡಿದಡೆ  
ಉತ್ತರವಾವುದೆಂದರಿಯ ಬೇಕು  
ಈ ಎರಡು ಉಭಯವ ಕಳೆದು ಸುಖಿ ತಾನಾಗಬಲ್ಲಡೆ  
ನಾಸ್ತೇನಾಥನು ಪರಿಪೂರ್ಣನೆಂಬ".[6]

## ಕದಿರೆರೆಮ್ಮವ್ವೆ

ಕದಿರೆರೆಮ್ಮವ್ವೆ ಮಹಾನ್ ಶರಣೆ ಇವಳ ಭಕ್ತಿ ಭಗವಂತನಲ್ಲಿ ಆಳವಾಗಿದ್ದಿತು. ಇವಳ ವಚನಗಳನ್ನು ಗಮನಿಸಿದರೆ ಅಲ್ಲಿ ಸಿಗುವುದು ಭಗವಂತನಲ್ಲಿ ಲಿಂಗಸ್ವರೂಪಿಯಾದ ಶಿವನಲ್ಲಿರುವ ಭಕ್ತಿಯ ಆಳ ಮತ್ತು ಅಧ್ಯಾತ್ಮದ ಅನುಭಾವ ತಿಳಿಯುತ್ತದೆ. ಶಿವನನ್ನು ಗಂಡನೆಂದು ತನ್ನನ್ನು ಅವನ ಸತಿಯೆಂದು ಭಾವಿಸುತ್ತ ಪ್ರತಿದಿನವೂ ಲಿಂಗ ಪೂಜೆ ಉಪಾಸನೆಗೈಯುತ್ತ ತನ್ನ ಪತಿ ಎಲ್ಲರಿಗಿಂತ ವಿಶೇಷವಾಗಿರುವವನು ಎಂದು ಹೆಮ್ಮೆಪಡುತ್ತಿದ್ದಳು.

ರೆಮ್ಮವ್ವೆಯನ್ನು ಕದಿರೆ ರೆಮ್ಮವ್ವೆಯೆಂದು ಕರೆಯಲು ಅವಳು ತಾನು ಮಾಡುವ ಕೆಲಸವನ್ನು ಸೇರಿಸಿಕೊಂಡು ಅವಳನ್ನು ಹೀಗೆ ಗುರುತಿಸಿರಬಹುದಾಗಿದೆ. ರಾಟೆಯಿಂದ ನೂಲನ್ನು ತಗೆಯುವುದೇ ಅವಳ ಕಾಯಕ ಅವಳ ಕಾಯಕದಲ್ಲಿ ಶಿವನನ್ನು ನೆನೆಯುವುದಲ್ಲದೆ ಅದರಲ್ಲೇ ಶಿವನನ್ನು ಕಾಣುತ್ತಾ

ರಾಟೆಯನ್ನೇ ಅನುಭಾವದ ಸಂಕೇತವನ್ನಾಗಿ ಮಾಡಿಕೊಂಡು ಪರಮಾತ್ಮನಿಗೆ ಪ್ರಿಯಳಾದಳು. ಶರಣೆ ರೆಮ್ಮವ್ವೆ ತನ್ನ ಗಂಡನನ್ನು ಕುರಿತು ಹೇಳುವ ಪರಿ.

"ಗಂಡ ಕೆಳಗೆ ನಾ ಮೇಲೆ ಎಂಬಲ್ಲಿ ಶರಣೆಯಾದ ನಾನು ಗಂಡನಾದ ಪರಶಿವನಿಗಿಂತ ಮೇಲೆ ಎಂಬ ಭಾವನೆ ಮೂಡಿದೆ. ಪರಬ್ರಹ್ಮನಿಲ್ಲದೆ ಹೇಗೆ ವಿಶ್ವ ಸೃಷ್ಟಿಯಿಲ್ಲವೋ ಹಾಗೆ ಭಕ್ತರಿಲ್ಲದೆ ಭಗವಂತನಿಲ್ಲ ಎಂಬ ಭಕ್ತಿಮಾರ್ಗದ ಸೂತ್ರವನ್ನು ಇಲ್ಲಿ ಪ್ರತಿಬಿಂಬಿಸಿದ್ದಾಳೆ. ವೃತ್ತಿಪರವಾದ ಭಾಷೆಯಲ್ಲಿ ಅಧ್ಯಾತ್ಮವನ್ನು ಸಾರುವ ಪರಿಗೆ ಈಕೆ ಉದಾಹರಣೆ"[7]

**ಕದಿರೆ ರೆಮ್ಮವ್ವೆಯ ಒಂದು ವಚನದ್ಲಲಿನ ಕೆಲವು ಸಾಲುಗಳು**

ಎಲ್ಲರ ಗಂಡಂದಿರು ಪರದಳ ವಿಭಾಡರು
ಎನ್ನ ಗಂಡ ಮನದಳ ವಿಭಾಡ
ಎಲ್ಲರ ಗಂಡಂದಿರು ಗಜವೇಂಟೆಕಾರರು
ಎನ್ನಗಂಡ ಮನವೇಂಟೆಕಾರ
ಎಲ್ಲರ ಗಂಡಂದಿರು ತಂದಿಕ್ಕಿಸಿಕೊಂಬರು
ಎನ್ನ ಗಂಡ ತಾರದೆ ಇಕ್ಕಿಸಿಕೊಂಬ
ಎಲ್ಲರ ಗಂಡಂದಿರಿಗೆ ಮೂರೂ
ಎನ್ನ ಅದೊಂದೆ : ಅದೊಂದು ಸಂದೇಹ ಗಂಡಂಗೆ
ಕದಿರರೆಮ್ಮಿಯೊಡೆಯ ಗುಮ್ಮೆಅಶ್ವರಾ

**ಅಡಿಟಿಪ್ಪಣಿಗಳು**

1. ಎನ್. ಎಂ. ಗಿರಿಜಾಪತಿ ; ವಚನರತ್ನ ತ್ರಯರು., ಪುಟ 24
2. ಅದೇ ಪುಟ 25
3. ಚಿತ್ಕಲಾರವಿ : ಅನುಭಾವ ಜ್ಯೋತಿಗಳು ; ಪುಟ 1
4. ಅದೇ ಪುಟ 2
5. ಅದೇ ಪುಟ 59.
6. ಅದೇ ಪುಟ 61
7. ಅದೇ ಪುಟ 75

**ಪರಾಮರ್ಶನ ಗ್ರಂಥಗಳು**

1. ಎನ್. ಎಂ. ಗಿರಿಜಾಪತಿ : ವಚನರತ್ನತ್ರಯರು; ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ; 2004
2. ಚಿತ್ಕಲರವಿ (ಸಂ) : ಅನುಭಾವ ಜ್ಯೋತಿಗಳು ; ಮಹಾಗಣಪತಿ ರಸ್ತೆ, ಹನುಮಂತ ನಗರ, ಬೆಂಗಳೂರು ; 2000